ಪೋಚಂಪಲ್ಲಿ ಸೀರೆಗೆ ಪೈಠಣ್ ಸೆರಗಿನ ಬೆಡಗು; ಧರ್ಮಾವರಂ ಸೀರೆಗಿಂತಲೂ ಭಿನ್ನವಾದದ್ದು ಪೈಠಣ್ ಸೀರೆ. ಇದೊಂದು ರೀತಿಯ ಹೈಬ್ರಿಡ್ ಸೀರೆ.

■ ಮುಕುಂದ್ ವಿ.ಕಿರಸೂರ್



# ಪೈಠಣ್ ಎಂಬ ಹೈಬ್ರಿಡ್ ಸೀರೆ!

ಪೈಠಣ್ ಪೀತಾಂಬರಗಳೆಂದೇ ಪ್ರಖ್ಯಾತವಾಗಿರುವ ಅಪ್ಪಟ ರೇಷ್ಮೆ ಹಾಗೂ ಚಿನ್ನದ ಜರಿಯಲ್ಲಿ ನೇಯ್ದ ಮಹಾರಾಷ್ಟ್ರದ ಪೈಠಣ್‌ನ ಕೈಮಗ್ಗದ ವೈಭವಯುತ ರೇಷ್ಮೆ ಸೀರೆಗಳು ದೇಶದಲ್ಲಿಯೇ ಅತಿ ದುಬಾರಿ. ಒಂದು ಕಾಲದಲ್ಲಿ ರಾಜ ಮನೆತನದವರಿಗೆ ಹಾಗೂ ಅತಿ ಗಣ್ಯ ಪರಿವಾರಗಳಿಗಾಗಿ ಮಾತ್ರ ಮೀಸಲಾಗಿದ್ದ ಈ ರೇಷ್ಮೆ ವಸ್ತ್ರಗಳನ್ನು ಔರಂಗಾಬಾದ್ ಬಳಿ ಇರುವ ಈ ಪುಟ್ಟ ಪಟ್ಟಣದಿಂದ ಹದಿನೇಳನೇ ಶತಮಾನದಲ್ಲಿಯೇ ರೋಮ್ ಮತ್ತಿತರ ದೇಶಗಳಿಗೆ ಅಮೂಲ್ಯ ರತ್ನ ಹಾಗೂ ಚಿನ್ನಕ್ಕೆ ಬದಲಾಗಿ ರಫ್ತು ಮಾಡಲಾಗುತ್ತಿತ್ತು. ಮಹಾರಾಷ್ಟ್ರದ ಸಾಂಪ್ರದಾಯಕ ಮದುವೆಗಳಲ್ಲಿ ವಧುವಿಗಾಗಿ ಈ ಸೀರೆ ಇರಲೇ ಬೇಕು. ಮರಾಠಿ ಸರದಾರನೊಬ್ಬ ಈ ನೇಯ್ಗೆ ಪ್ರಕಾರವನ್ನು ಶಿರಡಿ ಸಮೀಪದಲ್ಲಿರುವ ಏವ್ಲಾ ಪಟ್ಟಣಕ್ಕೆ ಪರಿಚಯಿಸಿದ ಎಂದು ಹೇಳಲಾಗುತ್ತದೆ. ಇಂದು ಪೈಠಣ್‌ಗಿಂತಲೂ ಏವ್ಲಾದಲ್ಲಿಯೇ ಈ ಸೀರೆಗಳ ತಯಾರಿಕೆ ಹೆಚ್ಚು. ಶಿರಡಿ ಸಾಯಿಬಾಬಾನ ದರ್ಶನಕ್ಕೆ ಬಂದವರೆಲ್ಲ ಈ ಸೀರೆಗಳಿಗೋಸ್ಕರ ಏವ್ಲಾ ಪಟ್ಟಣಕ್ಕೆ ಭೇಟಿ ಕೊಟ್ಟೇ ಹೋಗುತ್ತಾರೆ.

ನಾವು ಏವ್ಲಾದ ಖ್ಯಾತ ನೇಕಾರ ನಿತಿನ್ ಉಮಾಕಾಂತ್ ಹಂಡಿಯವರ ಮನೆಯನ್ನು ಪ್ರವೇಶಿಸಿದಾಗ ಅಲ್ಲಿಯ ಕೈಮಗ್ಗಗಳ ಶ್ರುತಿಬದ್ಧವಾದ ಶಬ್ದದ ಮಧ್ಯೆಯೂ ಲತಾ ಮಂಗೇಶ್ಕರ್ ಅವರ 'ರೇಷಮ್ ಕೀ ಡೋರಿ ಸೆ ಪ್ಯಾರ್ ಬಾಂದಾ ಹೈ' ಎಂಬ ಇಂಪಾದ ಹಾಡು ಹೊರಹೊಮ್ಮುತ್ತಿತ್ತು. ಸಿಲ್ಕ್, ಸುವರ್ಣ ಹಾಗೂ ಸಂಗೀತದ ಈ ಸಂಗಮದ ಪ್ರಭಾವವೇ ಇರಬೇಕು ಇವರ ಸೀರೆಗಳನ್ನು ದೃಶ್ಯಕಾವ್ಯಗಳನ್ನಾಗಿ ಪರಿವರ್ತಿಸಿದ್ದು. ನಿತಿನ್ ಕಲಾ ವಿಭಾಗದಲ್ಲಿ ಸ್ನಾತಕೋತ್ತರ ಪದವೀಧರರಾದರೂ, ತಲೆ ತಲಾಂತರದಿಂದ ಬಂದ ಪೈಠಣಿ ರೇಷ್ಮೆ ನೇಯ್ಗೆಯನ್ನೇ ಬದುಕಾಗಿಸಿಕೊಂಡವರು.

ಮದುವೆಗೆ ಮುನ್ನ ನೇಯ್ಗೆಯ ಬಗ್ಗೆ ಗಂಧಗಾಳಿಯೂ ಗೊತ್ತಿರದ ಅಂಜಲಿ, ಇಂದು ಡಿಸೈನರ್ ಕಮ್ ಡೈಯರ್ ಕಮ್ ವೀವರ್ ಕಮ್ ಮಾರ್ಕೆಟಿಂಗ್ ಮ್ಯಾನೇಜರ್. ಇವರು ಮನೆಯಿಂದಲೇ ಆಯ್ದ ಗ್ರಾಹಕರಿಗೆ ಅತ್ಯುತ್ಕೃಷ್ಟ ಪೈಠಣಿ ಸೀರೆಗಳನ್ನು ಹಾಗೂ ಡ್ರೆಸ್ ಮೆಟೀರಿಯಲ್‌ಗಳನ್ನು ಪೂರೈಸುತ್ತಾರೆ. ಭಾರತದಲ್ಲಿ ಕೃಷಿ ಹಾಗೂ ನೇಕಾರಿಕೆ ಅತಿ ದೊಡ್ಡ ಕೈಗಾರಿಕೆಗಳಾದರೂ ಕೂಡ ಮೂಲತ ಕೃಷಿಕ ಹಾಗೂ ನೇಕಾರ ಇಬ್ಬರೂ ಕಷ್ಟ ಜೀವಿಗಳೇ. ಕೆಲಸ ಸಾಕಷ್ಟು, ಗಳಿಕೆ ಇಷ್ಟೆ ಇಷ್ಟು. ಪೇಶ್ವೆಗಳ ಕಾಲದಲ್ಲಿ ರಾಜಾಶ್ರಯ ಪಡೆದು ವಿಜೃಂಭಿಸಿದ ಚಿನ್ನದ ಕೆಲಸ ಮಾಡಿದ ಪೈಠಣಿ ಪೀತಾಂಬರಗಳು ಕಾಲ ಸರಿದಂತೆ ತಮ್ಮ ಉತ್ಕೃಷ್ಟತೆಯಿಂದಾಗಿಯೇ ಗಗನ ಚುಂಬಿಯಾಗಿ ಬೇಡಿಕೆ ಕಳೆದುಕೊಂಡು ಮರೀಚಿಕೆಯಾಗಿ ಇತ್ತೀಚೆಗೆ ಕಳಪೆ ಗುಣಮಟ್ಟದ ನಕಲಿ ಪೈಠಣಿ ಸೀರೆಗಳು ಉತ್ಪಾದನೆಯಾಗುತ್ತಿರುವುದಕ್ಕೆ ಮೂಲ ಕಾರಣವಾಗಿದ್ದೊಂದು ವಿಪರ್ಯಾಸ. ನಿತಿನ್ ರವರ ಬಳಿ ಇರುವ ಪೈಠಣಿ ಸೀರೆಗಳ ಸೊಬಗನ್ನು ವರ್ಣಿಸಲಾಗದು. ಅವರ ಬಳಿ ಅವರ ತಾತ ಮುತ್ತಾತ ನೇಯ್ದ 200 ವರ್ಷಗಳ ಹಿಂದಿನ ಪೈಠಣಿ ಸೀರೆಗಳು ಇಂದಿಗೂ ಇವೆ. ಇನ್ನೂ ಹೊಚ್ಚ ಹೊಸದರಂತೆಯೇ.

ಇಲ್ಲಿಯ ಸೀರೆಗಳಿಗೆ ಸಾಮಾನ್ಯವಾಗಿ ಹಳದಿ, ಕೆಂಪು, ಹಸಿರು, ನೀಲಿ, ಗುಲಾಬಿ, ಕಂದು, ನೇರಳೆ, ಇತ್ಯಾದಿ ಆಸಿಡ್ ಹಾಗು ವ್ಯಾಟ್ ಬಣ್ಣಗಳನ್ನು ಉಪಯೋಗಿಸಲಾಗುತ್ತದೆ. ನೈಸರ್ಗಿಕ ಬಣ್ಣಗಳ ಬಗ್ಗೆ ಆಕರ್ಷಣೆ ಇತ್ತೀಚೆಗಷ್ಟೆ ಮತ್ತೆ ಹೆಚ್ಚುತ್ತಿದೆ. ಆಶ್ಚರ್ಯವೆಂದರೆ ನೂರಾರು ವರ್ಷಗಳ ಹಿಂದೆಯೇ ಮನೆಯಲ್ಲೆ ತಯಾರಿಸಿದ ನೈಸರ್ಗಿಕ ಬಣ್ಣಗಳು ಹಾಗೂ ಊರಲ್ಲಿಯ ಅಕ್ಕಸಾಲಿಗರು ತಯಾರಿಸಿಕೊಟ್ಟ ಪರಿಶುದ್ಧ ಚಿನ್ನದ ಜರಿಯೇ ಈ ಸೀರೆಗಳ ಮುಖ್ಯ

